**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂಎಫ್ ಸಿ ನ್ಯಾಯಾಲಯ, ರಾಣೆಬೆನ್ನೂರು.**

**ಅಪರಾಧಿಕ ಪ್ರಕರಣ ಸಂಖ್ಯೆ: 187/2019**

ಪಿರ್ಯಾದಿಃ ಗೌತಮ್ ಎಂಟರಪ್ರೈಸೆಸ್
ಇದನ್ನು ಪ್ರತಿನಿಧಿಸುವವರು ಇದರ ಪಾಲುದಾರರು
ಮಿತೇಶ್ ತಂದೆ ಪನ್ನಾಲಾಲ್ ಸಂಗವಿ.
ಸಾಃ ರಾಣೇಬೆನ್ನೂರು.

ವಿರುದ್ಧ

ಆರೋಪಿಃ 4. ಶ್ರೀ ಹೆಚ್ ಎಂ ಬಡಗೇರ ,
ವಾಸಃ ರಾಜೇಶ್ವರಿ ನಗರ ರಾಣೇಬೆನ್ನೂರು,

5. ವಿಜಯ ಕುಮಾರ ಬಿರಾದಾರ
ವಯಸ್ಸುಃ 50 ವರ್ಷ ಉದ್ಯೋಗಃ ನೌಕರಿ
ವಾಸಃ ಚೆನ್ನೇಶ್ವರ ನಗರ, ರಾಣೇಬೆನ್ನೂರು.

*****

**ದಂಡ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 313 ರ ಅಡಿಯಲ್ಲಿ ಆರೋಪಿತನ ಹೆಚ್ಚುವರಿ ಹೇಳಿಕೆ.**

**ಪ್ರಶ್ನೆ- 1 :** ನೀವು ಈ ಪ್ರಕರಣದ ಪಿರ್ಯಾದಿ ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

**ಉತ್ತರಃ- 1.** ಹೌದು.

**2.** ಹೌದು.

**ಪ್ರಶ್ನೆ-2** : ಪಿರ್ಯಾದಿಯವರು ಸಾಕ್ಷಿ ನುಡಿದು, ಆತ ಕೋಕೋಪಿಟ್, ಅಗ್ರಿಮೆಶ್ ಮತ್ತು ಪ್ಲಾಸ್ಟಿಕ್ ಫಿಲಂ ಮುಂತಾದ ವಸ್ತುಗಳ ವ್ಯಾಪಾರವನ್ನು ರಾಣೇಬೆನ್ನೂರಿನಲ್ಲಿ "ಗೌತಮ್ ಎಂಟರ್ ಪ್ರೈಸಸ್" ಎಂಬ ಹೆಸರಿನಲ್ಲಿ ಮಾಡುತ್ತಿದ್ದು, 1 ಮತ್ತು 2 ನೇ ಆರೋಪಿತರು ಬೀಜಗಳ ಉತ್ಪಾದನೆ ವ್ಯವಹಾರ ಮಾಡುತ್ತಿದ್ದು, 3 ನೇ ಆರೋಪಿತ ಶಾಖಾ ಕಛೇರಿಯಾಗಿರುತ್ತದೆ, 4 ನೇ ಆರೋಪಿತ ಮ್ಯಾನೇಜರ್ ಎಂದು ಹಾಗೂ 5 ನೇ ಆರೋಪಿತ ಫೀಲ್ಡ್ ಮ್ಯಾನೇಜರ್ ಎಂದು ನೌಕರಿ ಮಾಡುತ್ತಿದ್ದು, ಅವರು 1 ರಿಂದ 3 ನೇ ಆರೋಪಿತರ ಎಲ್ಲ ವ್ಯವಹಾರಗಳಿಗೆ ಹೊಣೆಗಾರ ಮತ್ತು ಬಾಧ್ಯಸ್ಥರಾಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರಃ- 1.** ಸುಳ್ಳು.

**2.** ಸುಳ್ಳು.

**ಪ್ರಶ್ನೆ-3** : ಫ್ರಾಸಾ 1 ರವರು ಮುಂದುವರೆದು, ದೂರುದಾರರು ಸರಬರಾಜು ಮಾಡಿದ ವಸ್ತುಗಳಿಗೆ 2 ನೇ ಆರೋಪಿತನ ಕಡೆಯಿಂದ ಹಣ ಪಾವತಿಯಾಗಿತ್ತು, ನಂತರ ಆರೋಪಿತರು ದೂರುದಾರರನ್ನು ಭೇಟಿಯಾಗಿ ಮೇಲೆ ಹೇಳಿದ ವಸ್ತುಗಳ ಖರೀದಿಗಾಗಿ ಬೇಡಿಕೆ ಸಲ್ಲಿಸಿದ್ದು ಬೇರೆ ಬೇರೆ ದಿನಾಂಕಗಳಂದು ದೂರುದಾರರು ಸುಮಾರು 7,30,274/- ರೂ. ಬೆಲೆ ಬಾಳುವ ವಸ್ತುಗಳನ್ನು ಆರೋಪಿತರಿಗೆ ನೀಡಿದ್ದು, ಸದರಿ ಹಣವನ್ನು ಮರುಪಾವತಿಸಲು ಎಲ್ಲ ಆರೋಪಿತರು ಬಾಧ್ಯಸ್ಥರಾಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ- 1.** ಸುಳ್ಳು.

**2.** ಸುಳ್ಳು.

**ಪ್ರಶ್ನೆ-4** : ಫ್ರಾಸಾ 1 ರವರು ಮುಂದುವರೆದು 1 ನೇ ಆರೋಪಿತರ ಸಂಸ್ಥೆಯ ಶಾಖೆಗಳು, ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಇದ್ದು, ಆರೋಪಿತರ ವಿನಂತಿಯ ಮೇರೆಗೆ ತಾನು ಕೊಪ್ಪಳ ಮತ್ತು ರಾಣೇಬೆನ್ನೂರು ಶಾಖೆಗಳಿಗೆ ಸರಕು ಸರಬರಾಜು ಮಾಡಿದ್ದೇನೆ, ಹಲವಾರು ಬಾರಿ 1 ರಿಂದ 3 ನೇ ಆರೋಪಿತರ ಪರವಾಗಿ 4 ಮತ್ತು 5 ನೇ ಆರೋಪಿತರು ವಸ್ತುಗಳನ್ನು ರಾಣೇಬೆನ್ನೂರಿನ ಅಂಗಡಿಯಿಂದ ಪಡೆದುಕೊಂಡಿದ್ದು ಎಲ್ಲ ಆರೋಪಿತರು ಹಣ ನೀಡಲು ಬಾಧ್ಯಸ್ಥರಾಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ,ಇದಕ್ಕೆ ಏನು ಹೇಳುವಿರಿ?

**ಉತ್ತರಃ- 1.** ಸುಳ್ಳು.

**2.**ಸುಳ್ಳು.

**ಪ್ರಶ್ನೆ-5** : ಫ್ರಾಸಾ 1 ರವರು ಮುಂದುವರೆದು ಆತ ಬಾಕಿ ಮೊತ್ತವನ್ನು ನೀಡುವಂತೆ ಹಲವಾರು ಬಾರಿ ನಿಮ್ಮನ್ನು ಕೇಳಿದಾಗ ನೀವು ಹಣ ನೀಡಲಿಲ್ಲ, ಸದರಿ ಹಣದ ತಿರುವಳಿಗಾಗಿ 4 ನೇ ಆರೋಪಿತರಾದ ನೀವು ಹೆಚ್ ಡಿ ಎಫ್ ಸಿ ಬ್ಯಾಂಕಿನ ಚೆಕ್‌ಗಳಾದ,ಚೆಕ್ ನಂಃ 000453 ನೇದ್ದನ್ನು ದಿಃ 06-09-2018 ರಂದು ರೂ. 2,89,401/- ಗಳಿಗೆ, ಚೆಕ್ ನಂಃ 000455 ನೇದ್ದನ್ನು ದಿಃ 20-09-2018 ರಂದು ರೂ. 2,57,514/- ಗಳಿಗೆ ಹಾಗೂ ಚೆಕ್ ನಂಃ 000456 ನೇದ್ದನ್ನು ದಿಃ 11-10-2018 ರಂದು ರೂ. 2,89,401/- ಗಳಿಗೆ ನೀಡಿದ್ದು ಅವುಗಳ ಪೈಕಿ 2 ಚೆಕ್ ಗಳು ಪೋಸ್ಟ ಡೇಟೆಡ್ ಚೆಕ್ ಗಳಾಗಿದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

**ಉತ್ತರಃ– 1.** ಸುಳ್ಳು.

**2.** ಸುಳ್ಳು.

**ಪ್ರಶ್ನೆ–6** : ಫ್ರಾಸಾ 1 ರವರು ಮುಂದುವರೆದು ಆತ ಸದರಿ ಚೆಕ್‌ಗಳನ್ನು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಚೆಕ್ ನಂಃ 000455 ಮತ್ತು 000456 ನೇದ್ದವುಗಳು ಆರೋಪಿತರ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕೆ ಹಾಗೂ ಚೆಕ್ ನಂಃ 000453 ನೇದ್ದು ಮಟೆರಿಯಲಿ ಅಲ್ಟರ್ಡ್ ಎಂಬ ಶರಾದೊಂದಿಗೆ ಅಮಾನ್ಯಗೊಂಡು ಹಿಂತಿರುಗಿದವು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ– 1.** ಸುಳ್ಳು.

**2.**ಸುಳ್ಳು.

**ಪ್ರಶ್ನೆ–7** : ಫ್ರಾಸಾ 1 ರವರು ಮುಂದುವರೆದು ಪ್ರಸ್ತುತ ಪ್ರಕರಣವನ್ನು ಚೆಕ್ ನಂಃ 000455 ನೇದ್ದರ ಕುರಿತು ದಾಖಲಿಸಿದ್ದು, ಚೆಕ್ ಅಮಾನ್ಯಗೊಂಡ ನಂತರ ದಿಃ 26–12–2018 ರಂದು ಡಿಮಾಂಡ್ ನೋಟಿಸನ್ನು ಆರೋಪಿತರಿಗೆ ನೀಡಿದ್ದು, ಸದರಿ ನೋಟಿಸು ದಿಃ 29–12–2018 ರಂದು 1 ಮತ್ತು 2 ಆರೋಪಿತರಿಗೆ, ದಿಃ 04–01–2019 ರಂದು 3 ಮತ್ತು 4 ನೇ ಆರೋಪಿತರಿಗೆ ಹಾಗೂ ದಿಃ 27–12–2018 ರಂದು 5 ನೇ ಆರೋತನಿಗೆ ಜಾರಿಯಾಗಿದ್ದು ಆರೋಪಿತರು ಚೆಕ್ ಹಣ ನೀಡಲಿಲ್ಲ ಆದ್ದರಿಂದ ಕಲಂ 138 ಎನ್ ಐ ಆಕ್ಟ ಅಡಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ಸಾಕ್ಷ್ಯ ನುಡಿದು ನಿಪಿ –1 ರಿಂದ 10 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ಇದಕ್ಕೆ ಏನು ಹೇಳುವಿರಿ?

**ಉತ್ತರಃ– 1.** ಸುಳ್ಳು.

**2.**ಸುಳ್ಳು.

**ಪ್ರಶ್ನೆಃ 8** ನೀವು ಮತ್ತೇನಾದರೂ ಹೇಳುವುದು ಅಥವಾ ದಾಖಲೆ ಸಲ್ಲಿಸುವುದು ಇದೆಯಾ?

**ಉತ್ತರಃ– 1.** ಇಲ್ಲ.

**2.** ಇಲ್ಲ.

**ಪ್ರಶ್ನೆ–9** : ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

**ಉತ್ತರಃ– 1.** ವಿಚಾರಣೆಯಾಗಬೇಕು.

**2.** ವಿಚಾರಣೆಯಾಗಬೇಕು.

(ಆರೋಪಿತನ ಹೇಳಿಕೆಯನ್ನು ಆತನು ಹೇಳಿದಂತೆ ಬರೆದುಕೊಳ್ಳಲಾಗಿದೆ ಅಂತ ಧೃಡೀಕರಿಸುತ್ತೇನೆ)

**ದಿನಾಂಕ** : 07-10-2023. **ಸಹಿ/-**

**ಸ್ಥಳ** : **ರಾಣೆಬೆನ್ನೂರು.** **2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು.**